ಚೌಕ ಪೊಲೀಸ್ ಠಾಣೆ ಕಲಬುರಗಿ

ದಿನಾಂಕ.17.07.2021

# ಪತ್ರಿಕಾ ಪ್ರಕಟಣೆ

## ಚೌಕ ಠಾಣೆಯ ಪೊಲೀಸರ ಕಾರ್ಯಚರಣೆ: ಮೋಟರ್ ಸೈಕಲ್ ಕಳ್ಳತನದ ಪ್ರಕರಣದಲ್ಲಿ ಆರೋಪಿತರ ಬಂಧನ

ಮಾನ್ಯ ಪೊಲೀಸ್ ಆಯುಕ್ತರು ಕಲಬುರಗಿ ನಗರ ಉಪ ಪೊಲೀಸ್ ಆಯುಕ್ತರು (ಕಾ & ಸು), ಉಪ ಪೊಲೀಸ್ ಆಯುಕ್ತರು (ಅ&ಸಂ) ಕಲಬುರಗಿ ನಗರ ಸಹಾಯಕ ಪೊಲೀಸ್ ಆಯುಕ್ತರು (ಬಿ) ಉಪ ವಿಭಾಗ ಕಲಬುರಗಿ ನಗರ ಶ್ರೀ ಎಸ್ ಆರ ನಾಯಕ್ ಪೊಲಿಸ್ ನಿರೀಕ್ಷಕರು ಚೌಕ ಪೊಲೀಸ್ ಠಾಣೆ ರವರ ಮಾರ್ಗದರ್ಶನದಂತೆ ಶ್ರೀ ಬಸವರಾಜ ಪಿ.ಎಸ್.ಐ, (ಕಾ& ಸು ) ನೇತೃತ್ವದಲ್ಲಿ ಮತ್ತು ಅಪರಾದ ಪತ್ತೆ ದಳದ ಸಿಬ್ಬಂದಿ ಜನರಾದ ಶ್ರೀ ಹುಸೇನ ಭಾಷಾ ಎ.ಎಸ್.ಐ , ಕೇಶವರಾಯ, ಸಿದ್ರಾಮಯ್ಯ, ಅಶೋಕ, ರಾಜಕುಮಾರ, ಸೈಯದ ತೌಸಿಪ, ಉಮೇಶ ಇವರೆಲ್ಲರೂ ಕೂಡಿಕೊಂಡು ಇಂದು ದಿನಾಂಕ 17.07.2021 ರಂದು ಬೇಳಗಿನ 07:00 ಗಂಟೆಗೆ ಚೌಕ ಠಾಣೆಯ ಗುನ್ನೆ ನಂ 97/2021 ಕಲಂ 379 ಐಪಿಸಿ ನೇದ್ದರ ಪ್ರಕರಣದಲ್ಲಿ ಆರೋಪಿ ಮತ್ತು ಮುದ್ದೆ ಮಾಲಿನ ಬಗ್ಗೆ ಪತ್ತೆ ಕಾರ್ಯದಲ್ಲಿ ಇದ್ದಾಗ ಕಲಬುರಗಿ ನಗರದ ಸೈಯ್ಯದ ಚಿಂಚೋಳಿ ಕ್ರಾಸ ಹತ್ತಿರ ಇಬ್ಬರು ಸಂಶಯಾಸ್ಪದ ಆಸಾಮಿಗಳು ನಂಬರ ಪ್ಲೇಟ ಇಲ್ಲದೆ ಒಂದು ದ್ವಿಚಕ್ರವಾಹನ ಮೇಲೆ ರೋಡಿನ ಮೇಲೆ ಬರುತ್ತಿದ್ದವರಿಗೆ ಹಿಡಿದು ಕೂಲಕುಂಶ ವಿಚಾರಿಸಿದಾಗ ಅವರು ತಮ್ಮ ಹೇಸರು 1) ಇಸ್ಮಾಯಿಲ ತಂದೆ ಖಾಜಾ ಮೈನೋದ್ದಿನ ತರಕಾರಿವಾಲೆ ವ: 26 ವರ್ಷ ಉ: ಅಟೋ ಚಾಲಕ ಜಾತಿ ಮುಸ್ಲಿಂ ಅಕ್ಸಾ ಮಸಿದಿ ಹಿಂದುಗಡೆ ಲಂಗಾರ ಬಾವಿ ಹತ್ತಿರ ಮುಸ್ಲಿಂ ಸಂಘ ಕಲಬುರ್ಗಿ. 2) ಅಬ್ದುಲ ಗಫಾರ ತಂದೆ ಅಬ್ದುಲ್ ಸಯ್ಯದ್ ಜಾತಿ ಮುಸ್ಲಿಂ ವ:22 ವರ್ಷ : ಕೂಲಿ ಕೇಲಸ ಅಕ್ಸಾ ಮಸಿದಿ ಹಿಂದುಗಡೆ ಲಂಗಾರ ಬಾವಿ ಹತ್ತಿರ ಮುಸ್ಲಿಂ ಸಂಘ ಕಲಬುರಗಿ ಇವರಿಗೆ ಹಿಡಿದು ವಿಚಾರಿಸಿದಾಗ ತಾವು ಕಳೆದ 3 ತಿಂಗಳ ಹಿಂದೆ ಸೂಪರ ಮಾರ್ಕೇಟ ಚೈನಾ ಬಜಾರದ ಅಂಗಡಿಯ ಮುಂದುಗಡೆ ಮತ್ತು ಕಿರಾಣಾ ಬಜಾರದ ಆರ್ಯ ಸಮಾಜದ ಭವನದ ಮುಂದೆ ನಿಲ್ಲಿಸಿದ ದ್ವಿಚಕ್ರ ವಾಹನಗಳು ಕಳುವು ಮಾಡಿಕೊಂಡು ಹೋಗಿರುವ ಬಗ್ಗೆ ತಪ್ಪು ಒಪ್ಪಿಕೊಂಡಿದ್ದು ಅಲ್ಲದೆ ಚೌಕ ಪೊಲೀಸ್ ಠಾಣೆಯ ಗುನ್ನೆ ನಂ 98/2021 ಕಲಂ 379 ಐಪಿಸಿ ಕೇಸಿಗೆ ಸಂಬಂಧ ಪಟ್ಟ ದ್ವಿಚಕ್ರವಾಹನ ಅಲ್ಲದೇ ಕಲಬುರಗಿ ನಗರದ ಹಾಗೂ ಕಲಬುರಗಿ ಜಿಲ್ಲೆಯ ವಿವಿಧ ಕಡೆಗಳಲ್ಲಿ ಕಳ್ಳತನವಾದ ಒಟ್ಟು 24 ದ್ವಿ ಚಕ್ರ ವಾಹನಗಳ ಅಂದಾಜು ಮೌಲ್ಯ 12 ಲಕ್ಷ ಬೆಲೆ ಬಾಳುವ ದ್ವಿಚಕ್ರ ವಾಹನಗಳನ್ನು ಜಪ್ತಿ ಪಡಿಸಿಕೊಂಡಿ ಸದರಿ ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಕಳುಹಿಸಿದ್ದು ಇರುತ್ತದೆ

ಸದರಿ ಪ್ರಕರಣದಲ್ಲಿ ಆರೋಪಿತರನ್ನು ಹಿಡಿಯುವಲ್ಲಿ ಯಶಸ್ವಿಗೊಂಡ ಚೌಕ ಪೊಲೀಸ್ ಠಾಣೆಯ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ಶ್ಲಾಘಿಸಲಾಗಿದೆ.